ಓ ಎಸ್ ನಂ.35/2021

ಪಿ.ಡಬ್ಲ್ಯೂ-1 ರುಕ್ಮಾಬಾಯಿ ಗಂಡ ಮಾರುತಿ ಕೋಳೇಕಾರ

(ಇಂದು ದಿನಾಂಕಃ **18-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ಸರ್ವೆ ನಂಬರ ೩೫೫/೫ ರ ೮ ಎಕರೆ ೨೯ ಗುಂಟೆ ದಾವಾ ಜಮೀನು ೧ನೇ ಪ್ರತಿವಾದಿ ಖರೀದಿಸಿದ ಮತ್ತು ಅವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿ ತಮ್ಮ ಹೆಂಡತಿಯಾದ ೨ನೇ ಪ್ರತಿವಾದಿಗೆ ಸದರಿ ಜಮೀನನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿಗೂ ಕೂಡಾ ಕಣ್ಣು ಕಾಣುವುದಿಲ್ಲ ಎಂದರೆ ಸರಿ. ಸಾಕ್ಷಿಯು ಅವರ ಕಣ್ಣು ಹೋಗಿ ೧೫ ವರ್ಷಗಳಾಗಿವೆ ಮತ್ತು ನನ್ನ ಕಣ್ಣು ಹೋಗಿ ೩೬ ವರ್ಷಗಳಾಗಿವೆ ಎನ್ನುತ್ತಾರೆ. ೧ನೇ ಪ್ರತಿವಾದಿ ತಮಗೆ ಜಮೀನು ನೋಡಲು ಆಗುವುದಿಲ್ಲ ಎಂದು ೨ನೇ ಪ್ರತಿವಾದಿಗೆ ತಮ್ಮ ಸ್ವಯಾರ್ಜಿತ ಆಸ್ತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

೨. ಯಶವಂತ ನಮ್ಮ ತಂದೆಯಾಗಿರುತ್ತಾರೆ. ನಮ್ಮ ತಂದೆ ಮೃತರಾಗಿ ೧೪ ವರ್ಷಗಳಾಗಿರುತ್ತವೆ. ನಮ್ಮ ತಂದೆ ತೀರಿದ ನಂತರ ದಾವಾ ಜಮೀನುಗಳಾದ ಸರ್ವೆ ನಂಬರ ೩೪೦ ಮತ್ತು ೩೪೧ ಗಳನ್ನು ೧ ರಿಂದ ೩ನೇ ಪ್ರತಿವಾದಿಗಳು ಮಾಡಿಕೊಂಡಿರುತ್ತಾರೆ. ಯಾವ ವರ್ಷದಲ್ಲಿ ಅವರು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಅವರು ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ಎಲ್ಲವು ಈಗ ಮಾರಾಟ ಆಗಿವೆ ಎಂದರೆ ಸಾಕ್ಷಿಯು ಸುಳ್ಳು ಮಾರಾಟಗಳಾಗಿರುತ್ತವೆ ಎನ್ನುತ್ತಾರೆ. ೩ನೇ ಪ್ರತಿವಾದಿಗೆ ನಮ್ಮ ಸೋದರ ಮಾವನ ಮಗಳನ್ನು ಮದುವೆ ಮಾಡಲಾಗಿರುತ್ತದೆ. ಸಾಕ್ಷಿಯು

ಅವಳು ಈಗ ಮೃತಳಾಗಿರುತ್ತಾಳೆ ಎನ್ನುತ್ತಾರೆ. ಅವರಿಗೆ ಒಂದು ಮಗು ಇದೆ ಎಂದರೆ ಸರಿ. ಸದರಿ ಮಗು ಈಗ ತನ್ನ ತಾಯಿಯ ತಾಯಿಯ ಬಳಿ ಇರುತ್ತದೆ. ಸದರಿ ಮಗುವಿಗೆ ಆಸ್ತಿ ಕೊಡಿಸುವ ಸಲುವಾಗಿ ನಾನು ಈಗ ಈ ಒಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

೩. ನಮ್ಮ ತಂದೆ ಇದ್ದಾಗಲೆ ನನಗೆ ಹಣ ಮತ್ತು ಬಂಗಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಣ ಮತ್ತು ಬಂಗಾರ ತೆಗೆದುಕೊಂಡು ದಾವಾ ಆಸ್ತಿಗಳಲ್ಲಿ ನನ್ನ ಹಕ್ಕು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

[ಉಳಿದ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರು ಇದ್ದುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.]

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.